### ವೈವಾಹಿಕ ಅತ್ಯಾಚಾರ

ಮಹಿಳೆಯ ದೇಹದ ಮೇಲೆ ಆಕೆಯ ಹಕ್ಕು ಖಾಸಗಿತನದ ಹಕ್ಕಿನ ಅಡಿ ಬರುವ ಮೂಲಭೂತ ಹಕ್ಕು. ಪತ್ನಿಯ ದೇಹವನ್ನು ಉಲ್ಲಂಘಿಸುವ ಹಕ್ಕು ಪತಿಗೂ ಇರುವುದಿಲ್ಲ. ಆದರೆ ವಿವಾಹವೆಂಬ ಪವಿತ್ರ 'ಸಂಸ್ಥೆ'ಯ ಮೇಲೆ ಪರಿಣಾಮ ಬೀರುತ್ತದೆ ಎನ್ನುವ ನೆಲೆಯಲ್ಲಿ 'ವೈವಾಹಿಕ ಅತ್ಯಾಚಾರ'ದ ವಿಚಾರವನ್ನು ಬದಿಗೆ ಸರಿಸುವುದನ್ನು ಭಾರತ ಸರ್ಕಾರ ಮುಂದುವರಿಸಿದೆ. ಮಹಿಳೆಯ ಸಮ್ಮತಿ, ಘನತೆ ಹಾಗೂ ಭದ್ರತೆಯ ವಿಚಾರಗಳಿಗೆ ಅದೇ ಪರಿಗಣನೆಯನ್ನು ನೀಡಲಾಗಿಲ್ಲ. ವೈವಾಹಿಕ ಅತ್ಯಾಚಾರವನ್ನು ಅಪರಾಧೀಕರಣಗೊಳಿಸಬೇಕೋ ಬೇಡವೋ ಎಂಬ ಬಗ್ಗೆ ದೆಹಲಿ ಹೈಕೋರ್ಟ್‌ನಲ್ಲಿ ಇಬ್ಬರು ನ್ಯಾಯಮೂರ್ತಿಗಳಿಗೆ ಒಮ್ಮತಕ್ಕೆ ಬರಲಾಗಲಿಲ್ಲ. 2022ರ ಮೇ ತಿಂಗಳಿಂದ ಈ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಕಾದು ಕೂತಿದೆ.

2019ರ 'ಎನ್‌ಎಫ್‌ಎಚ್‌ಎಸ್' ಅಂಕಿಅಂಶಗಳ ಪ್ರಕಾರ, ಭಾರತದಲ್ಲಿ ಶೇ. 27 ಮಹಿಳೆಯರು ತಮ್ಮ ಗಂಡಂದಿರಿಂದ ದೈಹಿಕ ಹಿಂಸೆ ಹಾಗೂ ಶೇ. 6.7 ಮಹಿಳೆಯರು ಲೈಂಗಿಕ ಹಿಂಸೆ ಅನುಭವಿಸುತ್ತಾರೆ.



'ವಾಯರಿಸಂ' ಪಿಡುಗಿನಿಂದಾಗಿ ಸಂತ್ರಸ್ತೆಯರು ಹಾಗೂ ಅವರ ಕುಟುಂಬದವರು ಮಾನಸಿಕ ಕ್ಷೋಭೆಗೆ ಒಳಗಾಗಬೇಕಾಗುತ್ತದೆ ಎಂಬುದು ನಮ್ಮ ನೆನಪಿನಲ್ಲಿರಬೇಕು. ಹಾಸನದಲ್ಲೂ ಸಂತ್ರಸ್ತ ಮಹಿಳೆಯರು ಊರು ಬಿಟ್ಟು ಹೋಗಿರುವಂತಹ ನೋವಿನ ಘಟನೆಗಳು ಸಂಭವಿಸಿವೆ. ಅಪರಾಧ ಕೃತ್ಯ ಎಸಗಿದ ಆರೋಪಿ, ಕಾನೂನು ಪ್ರಕ್ರಿಯೆಗಳಿಂದ ತಕ್ಷಣಕ್ಕೆ ತಪ್ಪಿಸಿಕೊಳ್ಳಲು ವಿದೇಶಕ್ಕೆ ಪಲಾಯನ ಮಾಡುವಷ್ಟು ಬಲಿಷ್ಠರು ಎಂಬುದು ನಮ್ಮ ವ್ಯವಸ್ಥೆಯ ದೌರ್ಬಲ್ಯಗಳನ್ನು ಧ್ವನಿಸುತ್ತದೆ.

### ಹೆಣ್ಣುಬಾಕರ ಹೊಸ ವಿಕೃತಿಗಳು

ತಮ್ಮ ಪುರುಷಾಹಂಕಾರವನ್ನು ಕೊಚ್ಚಿಕೊಳ್ಳುವುದಕ್ಕಾಗಿ ಲೈಂಗಿಕ ದೌರ್ಜನ್ಯಗಳ ಚಿತ್ರಗಳನ್ನು ಚಿತ್ರಿಸಿಕೊಂಡು ಸಾರ್ವಜನಿಕವಾಗಿ ಹಂಚಿಕೊಳ್ಳುವ ಪ್ರವೃತ್ತಿ ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿದೆ. ಇತ್ತೀಚೆಗೆ ಮಣಿಪುರದಲ್ಲಿ ನಗ್ನ ಮಹಿಳೆಯರ ಮೆರವಣಿಗೆ ಹಾಗೂ ಅತ್ಯಾಚಾರದ ದೃಶ್ಯಗಳನ್ನು ವಿಡಿಯೊ ಚಿತ್ರೀಕರಣ ಮಾಡಿಕೊಂಡು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಂಥ ಆಘಾತಕಾರಿ ವಿದ್ಯಮಾನಕ್ಕೂ ನಾವು ಸಾಕ್ಷಿಯಾಗಿದ್ದೇವೆ.

ಈ ಹಿಂದೆ ಅತ್ಯಾಚಾರಿಗಳು ತಮ್ಮ ಕುಕೃತ್ಯಗಳನ್ನು ಮುಚ್ಚಿಟ್ಟುಕೊಳ್ಳಲು ಯತ್ನಿಸುತ್ತಿದ್ದರು. ಆದರೆ ಈಗಿನ ಹೆಣ್ಣುಬಾಕರ ಹೊಸ ಪೀಳಿಗೆಯು ಆ ದುಷ್ಕೃತ್ಯಗಳನ್ನು ಚಿತ್ರೀಕರಿಸಿಕೊಳ್ಳುವ ವಿಕೃತಿಯ ಜೊತೆಗೆ ಅದನ್ನು ಕೆಲವರು ಸಾರ್ವಜನಿಕವಾಗಿ ಹಂಚುವ ಮಟ್ಟಕ್ಕೂ ಹೋಗುತ್ತಿರುವುದು ಸಮಾಜವನ್ನು ಆವರಿಸಿಕೊಳ್ಳುತ್ತಿರುವ 'ರೇಪ್ ಸಂಸ್ಕೃತಿ'ಗೆ ಸಂಕೇತ. 30 ಸೆಕೆಂಡ್‌ಗಳಿಂದ 5 ನಿಮಿಷಗಳ ತನಕದ ಅತ್ಯಾಚಾರ ದೃಶ್ಯಗಳಿರುವ 'ರೇಪ್ ವಿಡಿಯೊಗಳು' 50ರಿಂದ 150 ರೂಪಾಯಿಗಳವರೆಗೆ ಉತ್ತರ ಪ್ರದೇಶದ ಅಂಗಡಿಗಳಲ್ಲಿ ಮಾರಾಟವಾಗುತ್ತಿದ್ದುದು 2016ರಲ್ಲಿ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಈ ನಿಜ ಜೀವನದ ಘೋರ ಅಪರಾಧಗಳ ರೇಪ್ ವಿಡಿಯೊಗಳನ್ನು ಸ್ಮಾರ್ಟ್‌ಫೋನ್ ಅಥವಾ ಪೆನ್ ಡ್ರೈವ್‌ಗೆ ಹಾಕಿಕೊಡಲಾಗುತ್ತಿತ್ತು ಎಂದು ಆಗ ವರದಿಯಾಗಿತ್ತು.

ಅತ್ಯಾಚಾರಕ್ಕೊಳಗಾದ ಹೆಣ್ಣುಮಕ್ಕಳು ಪೊಲೀಸ್ ಬಳಿ ಹೋಗದಂತೆ ತಡೆಯಲು ಅಥವಾ ಮತ್ತೆ ಮತ್ತೆ ತಮ್ಮ ಬಳಿ ಬರುವಂತೆ ಮಾಡುವುದಕ್ಕಾಗಿ ಬ್ಲಾಕ್‌ಮೇಲ್ ಮಾಡಲೂ ಸೆಕ್ಸ್ ವಿಡಿಯೊಗಳನ್ನು ಚಿತ್ರೀಕರಿಸಿಕೊಳ್ಳಲಾಗುತ್ತಿರುವ ನೀಚತನಕ್ಕೇನು ಹೇಳಬೇಕು?

ತಮಗೆ ಸಂಬಂಧಿಸಿದ ವಿಡಿಯೊಗಳ ಪ್ರಸಾರ ತಡೆಹಿಡಿಯಲು ಮೂವರು ಖಾಸಗಿ ವ್ಯಕ್ತಿಗಳು ಹಾಗೂ 86 ಮಾಧ್ಯಮ ಸಂಸ್ಥೆಗಳ ವಿರುದ್ಧ 2023ರ ಜೂನ್ 1ರಂದು ಬೆಂಗಳೂರು ಸಿವಿಲ್ ಕೋರ್ಟ್ ಮೂಲಕ ಪ್ರಜ್ವಲ್ ರೇವಣ್ಣ ತಡೆ ಆದೇಶ ಪಡೆದುಕೊಂಡಿದ್ದುದೂ ಮಾಧ್ಯಮಗಳಲ್ಲಿ

